

## ಮುತ್ತಿನಿಂದ ಕರೀನಾ ದೂರ

**ಬಾ**ಲಿವುಡ್‌ನ ಅಚ್ಚರಿಯ ಜೋಡಿ ಸೈಫ್ ಅಲಿಖಾನ್ ಮತ್ತು ಕರೀನಾ ಕಪೂರ್ ಅವರದ್ದು. ಮದುವೆಯಾಗಿ ವರ್ಷ ಉರುಳಿದರೂ ಇನ್ನೂ ಸ್ನೇಹಿತರಂತೆ ಇರುವುದು ಕಂಡು, ಇಬ್ಬರ ಪ್ರೀತಿಯ ಆಯಸ್ಸು ಇಷ್ಟೇ ದಿನ ಎಂದು ಭವಿಷ್ಯ ನುಡಿಯುತ್ತಿದ್ದವರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಬಾಳ್ವೆ ನಡೆಸುತ್ತಿದೆ ಈ ಜೋಡಿ. ಇಬ್ಬರ ನಡುವಿನ ಹೊಂದಾಣಿಕೆಯೂ ವಿಶೇಷ. ಸೈಫ್ ಬೇರೆ ನಾಯಕಿಯರ ಜೊತೆ ತೆರೆ ಮೇಲೆ ರೊಮ್ಯಾನ್ಸ್ ಮಾಡಲು ನನ್ನ ತಕರಾರು ಇಲ್ಲ ಎಂದ ಕರೀನಾ ಮುಕ್ತವಾಗಿ ಹೇಳಿದ್ದರೆ, ಕರೀನಾ ನನಗಿಂತ ಬೇರೆ ನಟರೊಂದಿಗೇ ತೆರೆ ಹಂಚಿಕೊಳ್ಳುವುದು ಸರಿ ಎಂದು ಸೈಫ್ ಹೇಳಿದ್ದರು. ಹಾಗೆ ಸೈಫ್ ನಾಯಕಿಯರೊಟ್ಟಿಗೆ ತುಂಟತನ ಮುಂದುವರೆಸಿದ್ದರೆ, ಕರೀನಾ ರಾಜಾರೋಷವಾಗಿ ನಾಯಕ ನಟರ ತುಟಿಗೆ ತುಟಿಯೊತ್ತುವ, ಐಟಂ ಹಾಡುಗಳಿಗೆ ಹೆಜ್ಜೆ ಹಾಕುವ ಕಾಯಕ ಮುಂದುವರೆಸಿದ್ದರು. ಹೀಗಾಗಿ ಮದುವೆಯ ಬಳಿಕವೂ ಕರೀನಾ ಚಾರ್ಮ್ ಕಳೆದುಕೊಂಡಿಲ್ಲ.

ಆದರೆ ಹೀಗೆ ಪಡ್ಡೆಹೈಕಳ ಹೊಟ್ಟೆಯೊಳಗೆ ಚಿಟ್ಟೆ ಬಿಡುತ್ತಿದ್ದ ಕರೀನಾ ಈಗ ಅವರ ಬಯಕೆಗಳಿಗೆ ತಣ್ಣೀರೆರಚುವ ಸುದ್ದಿ ನೀಡಿದ್ದಾರೆ. ಇನ್ನು ಮುಂದೆ ಚುಂಬನ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ ಎಂಬ ಹೇಳಿಕೆ ನೀಡಿದ್ದಾರೆ. ಅಧರ ಬೆಸೆಯುವ ಹಸಿ ಸನ್ನಿವೇಶಗಳು ಕರೀನಾರಿಗೆ ಹೊಸತಲ್ಲ. ಬಾಲಿವುಡ್ ಜಗತ್ತಿನಲ್ಲಿ ಚುಂಬನ ಸನ್ನಿವೇಶಗಳೆಂದರೆ ಐಟಂ ಹಾಡಿನಷ್ಟೇ ಸಾಮಾನ್ಯ. ಆದರೆ ಇಷ್ಟು ಕಾಲ ಎಗ್ಗಿಲ್ಲದೆ ಬಿಸಿ ಮುಟ್ಟಿಸುತ್ತಿದ್ದ ಕರೀನಾ ಇದ್ದಕ್ಕಿದ್ದಂತೆ ಸೈಫ್‌ಗೆ ಬೇಸರವಾಗುತ್ತದೆ ಎಂಬ ಕಾರಣ ನೀಡಿ ಮುತ್ತಿನ ಸನ್ನಿವೇಶಗಳಿಗೆ ಬೈ ಬೈ ಹೇಳಿರುವುದು ಸರಿಯಲ್ಲ ಎನ್ನುವುದು ಕರೀನಾ ಅಭಿಮಾನಗಳ ಕೊರಗು.

■ ಅಮಿ




## ನಕಲಿ ಚಿತ್ರದ ಮೇಲೆ ಗರಂ

'ಸ್ಟೂಡೆಂಟ್ ಆಫ್ ದಿ ಇಯರ್' ಚಿತ್ರದ ಮೂಲಕ ಬಾಲಿವುಡ್‌ಗೆ ಅಡಿಯಿಟ್ಟ ಮಹೇಶ್ ಭಟ್ ಕುಟುಂಬದ ಕುಡಿ ಅಲಿಯಾ ಭಟ್ ಎರಡನೇ ಚಿತ್ರ ಬಿಡುಗಡೆಗೆ ಮುನ್ನವೇ ಬಿ–ಟೌನಿನ ಬಿಸಿ ಬಿಸಿ ಗಾಸಿಪ್‌ಗೆ ಗ್ರಾಸರಾಗಿದ್ದಾರೆ. 'ಹೈವೇ' ಚಿತ್ರದಲ್ಲಿ ನಟ ರಣದೀಪ್ ಹೂಡಾ ಜೊತೆಗೆ ಅಲಿಯಾ ರಸಮಯ ಭಂಗಿಗಳಲ್ಲಿ ಕಾಣಿಸಿಕೊಂಡಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿತ್ತು. ಆ ಗಾಳಿ ಮಾತಿಗೆ ಕಾರಣವಾಗಿದ್ದು ಅವರಿಬ್ಬರೂ ರೊಮ್ಯಾಂಟಿಕ್ ಭಂಗಿಯಲ್ಲಿ ಇರುವ ಚಿತ್ರಗಳು.

ರಸ್ತೆ, ಬೀಚ್, ಬೆಡ್‌ರೂಂ ಹೀಗೆ ನಾನಾ ಸನ್ನಿವೇಶಗಳಲ್ಲಿ ಅಲಿಯಾ ಮತ್ತು ರಣದೀಪ್ ಹಸಿಬಿಸಿ ಚಿತ್ರಗಳು ಅಂತರ್ಜಾಲದಲ್ಲಿ ಹರಿದಾಡುತ್ತಿವೆ. 'ಆದರೆ ಇದಾವುದೂ ನೈಜ ಚಿತ್ರಗಳಲ್ಲ. ಯಾವುದೋ ದೇಹಕ್ಕೆ ತಮ್ಮ ಮುಖಗಳನ್ನು ಅಂಟಿಸಿ ಈ ಚಿತ್ರಗಳನ್ನು ಸೃಷ್ಟಿಸಲಾಗಿದೆ' ಎಂದಿದ್ದಾರೆ ಅಲಿಯಾ. 'ಹೈವೇ' ಸಿನಿಮಾದ ಸ್ಟಿಲ್‌ಗಳಿಗೆ ಹತ್ತಿರವಾದ ನಕಲಿ ಸ್ಟಿಲ್‌ಗಳನ್ನು ಸೃಷ್ಟಿಸಿ ಅದಕ್ಕೆ ರಣದೀಪ್ ಮತ್ತು ತಮ್ಮ ಚಿತ್ರಗಳನ್ನು ಅಂಟಿಸಲಾಗಿದೆ ಎನ್ನುವುದು ಅಲಿಯಾ ಆರೋಪ. ಅಂದಹಾಗೆ, ಅಲಿಯಾ ಅರ್ಜುನ್ ಕಪೂರ್ ಜೊತೆ '2 ಸ್ಟೇಟ್ಸ್' ಚಿತ್ರದಲ್ಲಿಯೂ ಬಿಜಿಯಾಗಿದ್ದಾರೆ. ಇಬ್ಬರ ನಡುವೆ ಏನೋ ನಡೀತಾ ಇದೆ ಎನ್ನುವ ಗುಸುಗುಸು ಸಣ್ಣಗೆ ಶುರುವಾಗಿದೆ.